# 3 ನೇ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಮೈಸೂರು.

**ಸಿ.ಸಿ.ನಂಃ 10319/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ಸಂಜಯ್ | ಫ್ರಾಸಾಃ 01 |
| ತಂದೆಯ ಹೆಸರು | ಃ | ದೇವರಾಜು | ಚಾಸಾಃ 04 |
| ವಯಸ್ಸು | ಃ | 26 ವರ್ಷ | |
| ಉದ್ಯೋಗ | ಃ | ಖಾಸಗಿ ಕಂಪನಿಯಲ್ಲಿ ಕೆಲಸ | |
| ವಾಸ | ಃ | ಬೆಂಗಳೂರು | ದಿಃ 23.03.2026 |

**ಸಾಕ್ಷಿಗೆ ಪ್ರಮಾಣವಚನವನ್ನು ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿಯವರಿಂದಃ**

ಸಾಕ್ಷಿಗೆ ದಿಃ 17.07.2021 ಮತ್ತು ದಿಃ 08.08.2021 ರ ಮಹಜರ್ ನ ಮತ್ತು ಅಮಾನತ್ತು ಮಹಜರ್ ನ ದಾಖಲೆಗಳನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಸದರಿ ಸಹಿಗಳು ನನ್ನದಲ್ಲವೆಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನಿಪಿ–1 ಮತ್ತು 2 ಎಂದು ಗುರುತಿಸಲಾಯಿತು. ಸಾಕ್ಷಿಯು ಸಹಿಗಳನ್ನು ನಿರಾಕರಿಸಿದ ಕಾರಣ ಸದರಿ ಸಹಿಗಳನ್ನು ಗುರುತಿಸಿರುವುದಿಲ್ಲ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

(ಈ ಹಂತದಲ್ಲಿ ಮಾನ್ಯ ಎಪಿಪಿಯವರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿ ನುಡಿಯುತ್ತಿದ್ದು ಆತನನ್ನು ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು)

**ಪಾಟೀ ಸವಾಲು ಮಾನ್ಯ ಎಪಿಪಿಯವರಿಂದಃ**

ಆರೋಪಿ ನನ್ನ ಸ್ನೇಹಿತ ಎಂದರೆ ಸರಿ. ನಿಪಿ–1 ಮತ್ತು 2 ರಲ್ಲಿರುವ ಸಹಿಗಳು ನನ್ನದೇ ಆಗಿದ್ದರೂ ಆರೋಪಿ ನನ್ನ ಸ್ನೇಹಿತನಾದ ಕಾರಣ ನನ್ನದಲ್ಲವೆಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ದಿಃ 17.07.2020 ರಂದು ಪೊಲೀಸರು ಮಹಜರ್ ಕ್ರಮ ಜರುಗಿಸುವ ಸಲುವಾಗಿ ನನ್ನನ್ನು ಪಂಚರಾಗಿ ಸಹಕರಿಸಬೇಕೆಂದು ಕೋರಿಕೊಂಡರು ಎಂದರೆ ಸರಿಯಲ್ಲ. ನಾನು ಒಪ್ಪಿದ ಮೇರೆಗೆ ನನ್ನ ಮತ್ತು ಚಾಸಾ–5 ರವರ ಸಮಕ್ಷಮ ಬೋಗಾದಿಯ ಎಳೆಮಾರಮ್ಮ ದೇವಸ್ಥಾನದ ರಸ್ತೆ ನಂ.6, ಎಸ್ ವಿಎಸ್ ಕಾಂಪ್ಲೆಕ್ಸ ನ ಸೈಲ್ ಅಂಡ್ ಅರ್ನ ಫ್ಯಾಶನ್ಸ ಲಿಮಿಟೆಡ್ ನ ಕಚೇರಿಯಲ್ಲಿ ಮಹಜರ್ ಕ್ರಮ ಜರುಗಿಸಿದರು ಎಂದರೆ ಸರಿ. ಸದರಿ ಮಹಜರ್ ಸಮಯದಲ್ಲಿ ನಾನು ಹಾಜರಿರುತ್ತೇನೆ. ಸದರಿ ಮಹಜರ್ ಅನ್ನು ಬೆಳಗ್ಗೆ 10 ರಿಂದ 11 ರ ವರೆಗೆ ಬರೆಯಲಾಯಿತು ಎಂದರೆ ಸರಿಯಲ್ಲ. ಸಾಕ್ಷಿಯು ಸಂಜೆ

4 ರಿಂದ 5 ಗಂಟೆಯಾಗಿತ್ತು ಎಂದು ನುಡಿಯುತ್ತಾರೆ. ಸದರಿ ಮಹಜರ್ ಗೆನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ದಿಃ 08.08.2021 ರಂದು ಚಾಸಾ–1 ರವರಿಂದ 1 ರಶೀದಿ, ಕರ್ನಾಟಕ ಬ್ಯಾಂಕ್ ನ ಒಂದು ಚಲನ್, ಬಟ್ಟೆಗಳನ್ನು ನನ್ನ ಮತ್ತು ಚಾಸಾ–5 ರವರ ಸಮಕ್ಷಮ ಮಹಜರ್ ಕ್ರಮ ಜರುಗಿಸಿ ಅಮಾನತ್ತು ಪಡಿಸಿಕೊಂಡರು ಎಂದರೆ ನನಗೆ ಗೊತ್ತಿಲ್ಲ. ಸದರಿ ಮಹಜರ್ ಅನ್ನು ಸರಸ್ವತಿಪುರಂ ಪೊಲೀಸ್ ಠಾಣೆಯಲ್ಲಿ ಬರೆದಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ನಾನು ಈ ಪ್ರಕರಣದ ಬಗ್ಗೆ ತಿಳಿದುಕೊಂಡಿದ್ದು, ನಿಪಿ–1 ಮತ್ತು 2 ಕ್ಕೆ ಸಹಿ ಮಾಡಿದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃಃ ಆರೋಪಿ ಪರ ವಕೀಲರಿಂದಃಇಲ್ಲ.**

**ಮರುವಿಚಾರಣೆಃ** ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

**ಓ ಹೇ ಕೇ ಸ ಇದೆ**

**3 ನೇ ಪ್ರ.ದ.ನ್ಯಾ ದಂ. ಮೈಸೂರು.**